VIVEKANANDA COLLEGE
PUTTUR D.K
Date: 11/8/2022

# ಮಂಗಳೂರು ವಿಶ್ವವಿದ್ಯಾನಿಲಯ
# MANGALORE UNIVERSITY

ಕ್ರಮಾಂಕ/No. ಎಂಯು/ಎಸಿಸಿ/ಅಟೋ-ವಿವೇಕಾನಂದ/ಸಿಆರ್01/2022-23/ಎ6
926

ಕುಲಸಚಿವರಕಛೇರಿ
ಮಂಗಳಗಂಗೋತ್ರಿ – 574 199
Office of the Registrar
Mangalagangothri – 574 199
ದಿನಾಂಕ/Date: 10/08/2022

ವಿಷಯ: ಶೈಕ್ಷಣಿಕ ವರ್ಷ 2022-23ರಿಂದ 2031-32ರವರೆಗೆ ವಿವೇಕಾನಂದ ಕಾಲೇಜ್ ಆಫ್ ಆರ್ಟ್ಸ್, ಸಾಯನ್ಸ್ ಆಂಡ್ ಕಾಮರ್ಸ್, ನೆಹರೂ ನಗರ, ಪುತ್ತೂರು, ದ.ಕ ಎಂಬ ವಿದ್ಯಾಸಂಸ್ಥೆಗೆ ಸ್ವಾಯತ್ತ ಸ್ಥಾನಮಾನ ನೀಡುವ ಬಗ್ಗೆ.

ಉಲ್ಲೇಖ:
1) ಪ್ರಾಂಶುಪಾಲರು, ವಿವೇಕಾನಂದ ಕಾಲೇಜ್ ಆಫ್ ಆರ್ಟ್ಸ್, ಸಾಯನ್ಸ್ ಆಂಡ್ ಕಾಮರ್ಸ್, ನೆಹರೂ ನಗರ, ಪುತ್ತೂರು, ದ.ಕ ಇವರ ಪತ್ರ ಸಂಖ್ಯೆ: VCP/ Autonomous/2021, ದಿ: 08-10-2021.
2) ವಿಶ್ವವಿದ್ಯಾನಿಲಯ ಅನುದಾನ ಆಯೋಗ, ನವದೆಹಲಿ ಇವರ ಪತ್ರ ಸಂಖ್ಯೆ: 2-14(9)/ 2021(AC), ದಿ: 21-03-2022.
3) ಈ ಕಚೇರಿ ಪತ್ರ ಸಂಖ್ಯೆ: ಎಂಯು/ಎಸಿಸಿ/ಅಟೋ-ವಿವೇಕ/ಸಿಆರ್1/2021-22/ಎ6, ದಿ: 04-04-2022.
4) ವಿಶ್ವವಿದ್ಯಾನಿಲಯ ಅನುದಾನ ಆಯೋಗ, ನವದೆಹಲಿ ಇವರ ಪತ್ರ ಸಂಖ್ಯೆ: 22-1/ 2022(AC), ದಿ: 16-06-2022.
5) ಮಾನ್ಯ ಕುಲಪತಿಯವರ ಆದೇಶ ದಿನಾಂಕ: 04-07-2022.

*****

<u>ಪ್ರಸ್ತಾವನೆ:</u>

ಮಂಗಳೂರು ವಿಶ್ವವಿದ್ಯಾನಿಲಯದ ಅಧೀನಗೊಳಪಟ್ಟ ವಿವೇಕಾನಂದ ಕಾಲೇಜ್ ಆಫ್ ಆರ್ಟ್ಸ್, ಸಾಯನ್ಸ್ ಮತ್ತು ಕಾಮರ್ಸ್, ನೆಹರೂ ನಗರ, ಪುತ್ತೂರು, ದ.ಕ ಎಂಬ ವಿದ್ಯಾಸಂಸ್ಥೆಯ ಪ್ರಾಂಶುಪಾಲರು ಶೈಕ್ಷಣಿಕ ವರ್ಷ 2022-23ನೇ ಸಾಲಿನಿಂದ ಸ್ವಾಯತ್ತ ಸ್ಥಾನಮಾನ ಪಡೆಯುವ ಸಲುವಾಗಿ ವಿಶ್ವವಿದ್ಯಾನಿಲಯದ ಅನುಮೋದನೆಯೊಂದಿಗೆ ವಿಶ್ವವಿದ್ಯಾನಿಲಯ ಅನುದಾನ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಈ ಬಗ್ಗೆ ಉಲ್ಲೇಖ (2)ರಲ್ಲಿ ತಿಳಿಸಿರುವ ಪತ್ರದಲ್ಲಿ ವಿಶ್ವವಿದ್ಯಾನಿಲಯ ಅನುದಾನ ಆಯೋಗವು ಸದರಿ ಕಾಲೇಜಿಗೆ ಸ್ವಾಯತ್ತ ಸ್ಥಾನಮಾನ ನೀಡುವ ಸಲುವಾಗಿ ತಜ್ಞರ ಸಮಿತಿಯನ್ನು ರಚಿಸಿದ್ದು, ವಿಶ್ವವಿದ್ಯಾನಿಲಯದ ಒಬ್ಬ ಸದಸ್ಯರನ್ನು ನಾಮನಿರ್ದೇಶನ ಮಾಡುವಂತೆ ತಿಳಿಸಿರುತ್ತದೆ. ಈ ಹಿನ್ನಲೆಯಲ್ಲಿ ಉಲ್ಲೇಖ (3)ರಲ್ಲಿ ತಿಳಿಸಿರುವ ಪತ್ರದಲ್ಲಿ ತಜ್ಞರ ಸಮಿತಿಗೆ ವಿಶ್ವವಿದ್ಯಾನಿಲಯದ ಪ್ರತಿನಿಧಿಯಾಗಿ ಪ್ರೊ. ಮಂಜುನಾಥ ಪಟ್ಟಾಭಿ, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರನ್ನು ನೇಮಿಸಲಾಗಿರುತ್ತದೆ.

ಮುಂದುವರಿದು, ಉಲ್ಲೇಖ (4)ರಲ್ಲಿ ತಿಳಿಸಿರುವ ಪತ್ರದಲ್ಲಿ ವಿಶ್ವವಿದ್ಯಾನಿಲಯ ಅನುದಾನ ಆಯೋಗವು ವಿವೇಕಾನಂದ ಕಾಲೇಜ್ ಆಫ್ ಆರ್ಟ್ಸ್, ಸಾಯನ್ಸ್ ಮತ್ತು ಕಾಮರ್ಸ್, ನೆಹರೂ ನಗರ, ಪುತ್ತೂರು, ದ.ಕ ಈ ವಿದ್ಯಾಸಂಸ್ಥೆಗೆ ಶೈಕ್ಷಣಿಕ ವರ್ಷ 2022-23ರಿಂದ 2031-32ರವರೆಗೆ ವಿಶ್ವವಿದ್ಯಾನಿಲಯ ಅನುದಾನ ಆಯೋಗದ ವಿನಿಯಮ 2018ರ ಪ್ರಕಾರ ಪತ್ರದಲ್ಲಿ ತಿಳಿಸಿರುವ ಷರತ್ತಿಗೊಳಪಟ್ಟು ಸ್ವಾಯತ್ತ ಸ್ಥಾನಮಾನ ನೀಡಲು ನಿರ್ಣಯಿಸಿರುತ್ತದೆ. ಅಲ್ಲದೇ ಈ ಬಗ್ಗೆ ವಿಶ್ವವಿದ್ಯಾನಿಲಯದಿಂದ ಸೂಕ್ತ ಆದೇಶ ನೀಡುವಂತೆ ಸೂಚಿಸಲಾಗಿರುತ್ತದೆ.

ವಿಶ್ವವಿದ್ಯಾನಿಲಯ ಅನುದಾನ ಆಯೋಗದ ವಿನಿಯಮ 2018ರಲ್ಲಿ ಸಂಯೋಜಿತ ಕಾಲೇಜುಗಳಿಗೆ ಸ್ವಾಯತ್ತ ಸ್ಥಾನಮಾನ ನೀಡುವುದಾದಲ್ಲಿ "To forward the application of the college for autonomous status/ provide nominee on the Expert Committtee/ various Statutory Bodies and issue notification within 30 days for a college to function as an autonomous entity once autonomous status is conferred on the college" ಎಂದು ತಿಳಿಸಲಾಗಿರುತ್ತದೆ. ಆದರೆ ಕರ್ನಾಟಕ ರಾಜ್ಯ

ವಿಶ್ವವಿದ್ಯಾನಿಲಯಗಳ ಕಾಯ್ದೆ 2000ದ ಅಧಿನಿಯಮ 64ರಲ್ಲಿ ಸಂಯೋಜಿತ ಕಾಲೇಜುಗಳಿಗೆ ಸ್ವಾಯತ್ತ ಸ್ಥಾನಮಾನ ನೀಡಬೇಕಾದರೆ ರಾಜ್ಯ ಸರ್ಕಾರದ ಪೂರ್ವಾನುಮತಿ ಪಡೆಯಬೇಕೆಂಬುದಾಗಿ ವ್ಯಾಖ್ಯಾನಿಸಲ್ಪಟ್ಟಿರುತ್ತದೆ.

ವಿಶ್ವವಿದ್ಯಾನಿಲಯ ಅನುದಾನ ಆಯೋಗವು ಹೊರಡಿಸಿರುವ ಆದೇಶದಲ್ಲಿ ವಿಶ್ವವಿದ್ಯಾನಿಲಯ ಅನುದಾನ ಆಯೋಗದ ವಿನಿಯಮ 2018ರಂತೆ ಸದರಿ ವಿದ್ಯಾಸಂಸ್ಥೆಗೆ ಸ್ವಾಯತ್ತ ಸ್ಥಾನಮಾನ ನೀಡುವಂತೆ ತಿಳಿಸಿರುವುದರಿಂದ ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಿಗೆ ಸ್ವಾಯತ್ತತೆ ನೀಡುವ ಹಾಗೂ ಸ್ವಾಯತ್ತ ಕಾಲೇಜುಗಳ ಕಾರ್ಯ ನಿರ್ವಹಣೆಯನ್ನು ನಿಯಂತ್ರಿಸುವ ಅನುಶಾಸನವನ್ನು ತಿದ್ದುಪಡಿಗೊಳಿಸುವ ಷರತ್ತಿನ ಮೇರೆಗೆ ವಿವೇಕಾನಂದ ಕಾಲೇಜ್ ಆಫ್ ಆರ್ಟ್ಸ್, ಸಾಯನ್ಸ್ ಮತ್ತು ಕಾಮರ್ಸ್, ನೆಹರೂ ನಗರ, ಪುತ್ತೂರು, ದ.ಕ ಈ ವಿದ್ಯಾಸಂಸ್ಥೆಗೆ ಶೈಕ್ಷಣಿಕ ವರ್ಷ 2022–23ರಿಂದ 2031–32ರವರೆಗೆ ಸ್ವಾಯತ್ತ ಸ್ಥಾನಮಾನ ನೀಡಲು ನಿರ್ಣಯಿಸಲಾಗಿರುತ್ತದೆ.

ಈ ಹಿನ್ನಲೆಯಲ್ಲಿ ಕೆಳಕಂಡ ಕಾರ್ಯಕ್ರಮಗಳಿಗೆ ಕೆಳಗೆ ನಮೂದಿಸಿರುವ ವಿದ್ಯಾರ್ಥಿ ಪರಿಮಿತಿಯೊಂದಿಗೆ ವಿವೇಕಾನಂದ ಕಾಲೇಜ್ ಆಫ್ ಆರ್ಟ್ಸ್, ಸಾಯನ್ಸ್ ಮತ್ತು ಕಾಮರ್ಸ್, ನೆಹರೂ ನಗರ, ಪುತ್ತೂರು, ದ.ಕ ಈ ವಿದ್ಯಾಸಂಸ್ಥೆಗೆ ಶೈಕ್ಷಣಿಕ ವರ್ಷ 2022–23ರಿಂದ 2031–32ರವರೆಗೆ ಕೆಲವೊಂದು ಷರತ್ತಿಗೊಳಪಟ್ಟು ಸಿಂಡಿಕೇಟ್ ಸಭೆ ಹಾಗೂ ಶೈಕ್ಷಣಿಕ ಮಂಡಳಿ ಸಭೆಯ ಘಟನೋತ್ತರ ಅನುಮೋದನೆಯ ನಿರೀಕ್ಷೆಯ ಮೇರೆಗೆ ಸ್ವಾಯತ್ತ ಸ್ಥಾನಮಾನ ನೀಡಿ ಈ ಆದೇಶವನ್ನು ಹೊರಡಿಸಲಾಗಿದೆ.

ಆದೇಶ ಸಂಖ್ಯೆ: ಎಂಯು/ಎಸಿಸಿ/ಅಟೋ–ವಿವೇಕಾನಂದ/ಸಿಆರ್1/2022–23/ಎ6, ದಿ: 10/08/2022

| Programme | Language | Course | Intake |
|---|---|---|---|
| B.A | Kannada, Hindi, English, Sanskrit | History, Economics, Sociology | 20 |
| | | History, Economics, English | 20 |
| | | History, Journalism, Kannada | 40 |
| | | History, Journalism, English | 30 |
| | | History, Economics, Kannada | 30 |
| | | History, Economics, Political Science | 40 |
| B.Sc | | Physics, Mathematics, Electronics | 30 |
| | | Physics, Mathematics, Computer Science | 30 |
| | | Physics, Mathematics, Chemistry | 90 |
| | | Botany, Zoology, Chemistry | 70 |
| B.Com | | Compulsory Subjects as per regulation | 420 (5 Sections) |
| BCA | | Compulsory Subjects as per regulation | 160 (3 Sections) |
| BBA | | Compulsory Subjects as per regulation | 70 |
| M.Com | | Compulsory Subjects as per regulation | 60 |
| M. Sc Chemistry | | Compulsory Subjects as per regulation | 30 |
| M. Sc Mathematics | | Compulsory Subjects as per regulation | 30 |
| M.A Journalism And Communication | | Compulsory Subjects as per regulation | 30 |

ಷರತ್ತುಗಳು:

1. ಇದು ಶೈಕ್ಷಣಿಕ ವಿಷಯಕ್ಕೆ ಮಾತ್ರ ನೀಡಿದ ಸ್ವಾಯತ್ತತೆಯಾಗಿದೆ.
2. ಸ್ವಾಯತ್ತ ಮಹಾವಿದ್ಯಾಲಯಗಳು ವಿದ್ಯಾರ್ಥಿಗಳ ಪ್ರವೇಶಾತಿ ಹಾಗೂ ಸಿಬ್ಬಂದಿ ವರ್ಗದವರ ನೇಮಕಾತಿಗಳಲ್ಲಿ ಸರಕಾರದ ಮೀಸಲಾತಿ ನಿಯಮಗಳನ್ನು ಹಾಗೂ ಮತ್ತಿತರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
3. ವಿಶ್ವವಿದ್ಯಾನಿಲಯವು ಕಾಲಕಾಲಕ್ಕೆ ಹೊರಡಿಸುವ ಪರಿನಿಯಮಗಳು, ವಿನಿಯಮಗಳು ಹಾಗೂ ಇತರ ನಿಯಮಾಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
4. ವಿಶ್ವವಿದ್ಯಾನಿಲಯವು ನಿಗದಿಪಡಿಸಿದ ಶುಲ್ಕವನ್ನು ಮಾತ್ರ ವಿದ್ಯಾರ್ಥಿಗಳಿಂದ ಪಡೆಯಬೇಕು.
5. ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಿಗೆ ಸ್ವಾಯತ್ತತೆ ನೀಡುವ ಹಾಗೂ ಸ್ವಾಯತ್ತ ಕಾಲೇಜುಗಳ ಕಾರ್ಯ ನಿರ್ವಹಣೆಯನ್ನು ನಿಯಂತ್ರಿಸುವ ಅನುಶಾಸನವನ್ನು ತಿದ್ದುಪಡಿಗೊಳಿಸಿ ಸರ್ಕಾರದ ಅನುಮೋದನೆ ಪಡೆಯುವ ಷರತ್ತಿಗೊಳಪಟ್ಟಿರುತ್ತದೆ.
6. ಈ ಸ್ವಾಯತ್ತ ಸ್ಥಾನಮಾನವು ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ನಿಯಮಾವಳಿಗೆ ಬದ್ಧವಾಗಿರುತ್ತದೆ.

ಕುಲಸಚಿವರು

ರಿಗೆ,

ಪ್ರಾಂಶುಪಾಲರು
ವಿವೇಕಾನಂದ ಕಾಲೇಜ್ ಆಫ್ ಆರ್ಟ್ಸ್, ಸಾಯನ್ಸ್ ಮತ್ತು ಕಾಮರ್ಸ್,
ನೆಹರೂ ನಗರ, ಪುತ್ತೂರು–574203

11/8/2022